**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 31 /07/2024 )**

**ಪಾಟೀ ಸವಾಲು : ವಾದಿ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ಈ ದಾವೆಯಲ್ಲಿ ವಾದಿ ವಾದ ಪತ್ರದಲ್ಲಿ ಕಾಣಿಸಿದ ದಾವಾ ಕಟ್ಟಡದ ವಿವರದ ಬಗ್ಗೆ ತಿಳಿದುಕೊಂಡಿರುತ್ತೇನೆ. ಅದರಲ್ಲಿ ಕಾಣಿಸಿದ ಕಟ್ಟಡದ ವಿವರ ಸರಿಯಾಗಿರುತ್ತದೆ ಎಂದರೆ ಸರಿ. ನಾನು ದಾವಾ ಕಟ್ಟಡದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಬಟಾಟೆ, ಒಣ ಮೆಣಸು ಮಾರಾಟ ಮಾಡುತ್ತೇನೆ. ಸಾಕ್ಷಿಯು ಮುಂದುವರೆದ ಪ್ರಸ್ತುತ ನಾನು ಆಹಾರ ಪದಾರ್ಥಗಳನ್ನೂ ಸಹ ಮಾರಾಟ ಮಾಡುತ್ತಿದ್ದೇನೆ ಎಂದು ಉತ್ತರಿಸಿರುತ್ತಾರೆ. ಈ ಮೇಲೆ ಹೇಳಿದಂತೆ ಮಾರಾಟ ಮಾಡಲು ಪರವಾನಿಗೆ



ಪಡೆದಿರುತ್ತೇನೆ. ಸದ್ರಿ ಪರವಾನಿಗೆಯನ್ನು ಯಾವಾಗ ಪಡೆದಿದ್ದೇನೆ ಎಂದು ನೆನಪಿಲ್ಲ. ಸಾಮಾನ್ಯವಾಗಿ ಯಾವುದೇ ವ್ಯಾಪಾರದ ಪರವಾನಿಗೆಯನ್ನು ಪ್ರತಿವರ್ಷ ನವೀಕರಿಸ ಬೇಕು ಎಂಬ ವಿಚಾರ ನನಗೆ ತಿಳಿದಿರುತ್ತದೆ. ನಾನು ಈವರೆಗೆ ನನ್ನ ವ್ಯಾಪಾರದ ಪರವಾನಿಗೆಯನ್ನು ನವೀಕರಣ ಮಾಡಿರುವುದಿಲ್ಲ. ಪ್ರಸ್ತುತ ನಾನು ಪರವಾನಿಗೆ ಇಲ್ಲದೇ ಮಾರಾಟ ಮಾಡುತ್ತಿದ್ದೇನೆ ಎಂದರೆ ಸರಿ. ವ್ಯಾಪಾರದ ಪರವಾನಿಗೆಯನ್ನು ನವೀಕರಿಸಲು ನಿಮಗೇನಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಪಟ್ಟಣ ಪಂಚಾಯತಿಯವರು ಎಲ್ಲಾ ಬರೆದುಕೊಂಡು ಹೋಗಿ ನನಗೆ ಪರವಾನಿಗೆಯನ್ನು ನೀಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಯಾವುದೇ ವ್ಯಾಪಾರದ ಪರವಾನಿಗೆಯನ್ನು ಪಡೆದುಕೊಳ್ಳಬೇಕಾದರೆ ಕಟ್ಟಡದ ದಾಖಲಾತಿಗಳನ್ನು ನೀಡಬೇಕು ಎಂದರೆ ಗೊತ್ತಿಲ್ಲ. ನಾನು ಈ ಮೇಲೆ ಹೇಳಿದಂತೆ ಮೊದಲು ಪರವಾನಿಗೆಯನ್ನು ಪಡೆಯುವಾಗ ನಾನು ಯಾವುದೇ ಕಟ್ಟಡದ ದಾಖಲಾತಿಗಳನ್ನು ನೀಡಿರುವುದಿಲ್ಲ. ಕಟ್ಟಡದ ಬಾಡಿಗೆ ಕರಾರನ್ನು ನೀಡಿ ಪರವಾನಿಗೆಯನ್ನು ನವೀಕರಣ ಮಾಡಬೇಕಾಗಿರುವುದರಿಂದ ನಾನು ನನ್ನ ವ್ಯಾಪಾರದ ಪರವಾನಿಗೆಯನ್ನು ನವೀಕರಣ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾ ಕಟ್ಟಡದಲ್ಲಿ ನಾನು ಪ್ರಸ್ತುತ ಬೇಕರಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದೇನೆ. ಆ ಬಗ್ಗೆ ನಾನು ಆಹಾರ ಇಲಾಖೆಯಿಂದ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆ ರೀತಿ ನಾನು ಆಹಾರ ಪದಾರ್ಥಗಳನ್ನು ಕಳೆದ 2–3 ತಿಂಗಳಿನಿಂದ ಮಾರಾಟ ಮಾಡುತ್ತಿದ್ದೇನೆ ಎಂದು ಹೇಳಿರುತ್ತಾರೆ. ನನ್ನ ತಾಬಾದಲ್ಲಿ ದಾವಾ ಕಟ್ಟಡದ ಎರಡು ಅಂಗಡಿಗಳು ಇರುತ್ತವೆ ಎಂದರೆ ಸರಿಯಲ್ಲ. ಸದ್ರಿ ಕಟ್ಟಡದ ಸಂಖ್ಯೆ 8/1 ಎ ಮತ್ತು 8/1 ಬಿ ಆಗಿರುತ್ತದೆ ಎಂದರೆ ಇರಬಹುದು ಗೊತ್ತಿಲ್ಲ. ಪ್ರಸ್ತುತ ಸದ್ರಿ ಕಟ್ಟಡದ ಹೊಸ ಸಂಖ್ಯೆ 375 ಎ ಮತ್ತು 375 ಬಿ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಈ ಮೇಲೆ ಹೇಳಿದಂತೆ ನಾನು ನಡೆಸುತ್ತಿರುವ ವ್ಯಾಪಾರದ ಕಟ್ಟಡದ ಸಂಖ್ಯೆ ಯಾವುದು ಎಂದು ಗೊತ್ತಿಲ್ಲ. ಕಟ್ಟಡ ಸಂಖ್ಯೆ 375 ಎ ಮತ್ತು 375 ಬಿ ವೆಂಕಟಾಪುರ ಗ್ರಾಮದ ಸರ್ವೇ ನಂಬರ 88/231 ರಲ್ಲಿ ಇರುತ್ತದೆ. ಸದ್ರಿ ಕಟ್ಟಡಗಳು ವೆಂಕಟಾಪುರ ಗ್ರಾಮದ ಸರ್ವೇ ನಂಬರ 88/231 ರಲ್ಲಿರುತ್ತದೆ ಎಂದು ತೋರಿಸಲು ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ. ನಿಡಿ–



5 ಪಹಣಿ ಪತ್ರಿಕೆಯಲ್ಲಿ ಕಟ್ಟಡ ಇರುವ ಬಗ್ಗೆ ನಮೂದು ಇರುವುದಿಲ್ಲ. ಸದ್ರಿ ಪಹಣಿ ಪತ್ರಿಕೆಯನ್ನು ಹೊರತುಪಡಿಸಿ ಕಟ್ಟಡಗಳು ಈ ಮೇಲೆ ಹೇಳಿದ ಸರ್ವೇ ನಂಬರನಲ್ಲಿ ಬರುತ್ತದೆ ಎಂದು ತೋರಿಸಲು ದಾಖಲಾತಿ ಇರುವುದಿಲ್ಲ. ಕಟ್ಟಡ ಸಂಖ್ಯೆ 375 ಎ ಮತ್ತು 375 ಬಿ ಇದು ಪಂಚಾಯತ್ ದಾಖಲೆಗಳಲ್ಲಿ ವಾದಿಯ ಹೆಸರಿನಲ್ಲಿರುತ್ತದೆ. ಸದ್ರಿ ಕಟ್ಟಡಗಳ ಮಾಲೀಕತ್ವದ ಬಗ್ಗೆ ಪಂಚಾಯತ್ ದಾಖಲಾತಿಗಳಲ್ಲಿ ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಅದನ್ನೆಲ್ಲಾ ಅವರು ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಪಂಚಾಯತ್ ನಲ್ಲಿ ಕಟ್ಟಡ ಸಂಖ್ಯೆ 375 ಎ ಮತ್ತು 375 ಬಿ ಗೆ ಸಂಬಂಧಿಸಿದಂತೆ ಕರವನ್ನು ವಾದಿಯೇ ತುಂಬುತ್ತಿದ್ದಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲಾತಿಗಳ ಬಗ್ಗೆ ಸ್ವಲ್ಪ ತಿಳಿದುಕೊಂಡಿರುತ್ತೇನೆ. ನಿಪಿ–3 ಮತ್ತು 4 ರಂತೆ ವಾದಿಯವರು ದಾವಾ ಕಟ್ಟಡಕ್ಕೆ ತೆರಿಗೆ ಕಟ್ಟುತ್ತಿದ್ದಾರೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಬರುತ್ತದೆ. ನಿಪಿ–3 ಮತ್ತು 4 ವಾದಿ ಪಾವತಿಸಿದ ತೆರಿಗೆಯ ರಶೀದಿಗಳು ಎಂದರೆ ಇರಬಹುದು. ಆ ಬಗ್ಗೆ ಮಾಹಿತಿ ಇಲ್ಲ. ಪಂಚಾಯತಿಯಲ್ಲಿ ದಾವಾ ಕಟ್ಟಡಗಳು ವಾದಿಯ ಹೆಸರಿನಲ್ಲಿ ತಪ್ಪಾಗಿ

ದಾಖಲಾಗಿದೆ ಎಂದು ಪಂಚಾಯತಿಯ ವಿರುದ್ಧ ದಾವೆ ದಾಖಲಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನ್ನ ತಂದೆಯ ಕಾಲದಲ್ಲಿ ಆಗಿದ್ದು ಅವರು ದಾವೆ ಹೂಡಿರಬಹುದು ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಪತ್ನಿ ಆ ಬಗ್ಗೆ ಯಾವುದೇ ದಾವೆ ದಾಖಲಿಸಿರುವುದಿಲ್ಲ.

3. ನಿಡಿ-6 ಪರವಾನಿಗೆ ನನ್ನ ಅಂಗಡಿಯ ಕಟ್ಟಡಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ. ನಿಡಿ-6 ರಲ್ಲಿ ಕಟ್ಟಡ ಸಂಖ್ಯೆ ಮತ್ತು ಸರ್ವೇ ನಂಬರ ಕಂಡುಬರುವುದಿಲ್ಲ ಎಂದರೆ ಸರಿ. ನಿಡಿ-6 ಪಡೆಯಲು ಆಧಾರ ಕಾರ್ಡ ಮತ್ತು ಪಾನ್ ಕಾರ್ಡಿನ ಪ್ರತಿಗಳನ್ನು ನೀಡಿರುತ್ತೇನೆ. ಅದೇ ರೀತಿ ವಿದ್ಯುತ್ ಬಿಲ್ಲಿನ ಪ್ರತಿಯನ್ನು ನೀಡಿರುತ್ತೇನೆ. ನನ್ನ ಅಂಗಡಿಯ ವಿದ್ಯುತ್ ಮೀಟರ್ ಸಂಖ್ಯೆ ಆರ್ ಆರ್ 10976 ಮತ್ತು 10978 ಆಗಿರುತ್ತದೆ. ಮೀಟರ್ ಸಂಖ್ಯೆ ಆರ್ ಆರ್ 10976 ವಾದಿಯ ಹೆಸರಿನಲ್ಲಿ ಇರುತ್ತದೆ. ಸಾಕ್ಷಿಯು ಮುಂದುವರೆದು ಅದರಲ್ಲಿ ಅಡ್ಡಹೆಸರು ಸಾಗರ್ ರಸ್ತೆ ಎಂದು ಇರುತ್ತದೆ, ಆದರೆ ನನ್ನ ಮೀಟರಿಗೆ ಹಿಂದೂ ಕಾಲೋನಿ ಇದೆ ಎಂದು ಹೇಳಿರುತ್ತಾರೆ. ಮೀಟರ್ ಸಂಖ್ಯೆ ಆರ್ ಆರ್ 10977 ಮತ್ತು 10978 ಸಹ ವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಹೌದು. ಸಾಕ್ಷಿಯು



ಮುಂದುವರೆದು ಬೇರೆ ಅಡ್ಡ ಹೆಸರು ಇರುವ ಮೀಟರ್ ತಂದು ಅಂಗಡಿಯ ಹತ್ತಿರ ಹಾಕಿರುತ್ತಾರೆ ಎಂದು ಹೇಳಿರುತ್ತಾರೆ. ಮೀಟರ್ ಸಂಖ್ಯೆ ಆರ್ ಆರ್ 10977 ಮತ್ತು 10976 ರ ವಿದ್ಯುತ್ತನ್ನು ಉಪಯೋಗಿಸುತ್ತಿದ್ದೀರಿ ಎಂದರೆ ಸಾಕ್ಷಿಯು ಮೀಟರ ಸಂಖೆ ಆರ್ ಆರ್ 10978 ಮತ್ತು 10976 ರ ವಿದ್ಯುತ್ ಬಳಕೆ ಮಾಡುತ್ತಿದ್ದೇವೆ ಎಂದು ಉತ್ತರಿಸಿರುತ್ತಾರೆ. ವಿದ್ಯುತ್ ಇಲಾಖೆಯಲ್ಲಿ ದಾವಾ ಕಟ್ಟಡದ ಮಾಲೀಕರು ವಾದಿ ಎಂದು ಇರುತ್ತದೆ ಎಂದರೆ ಸರಿ. ನಾನು ಹೇಳುವಂತೆ ಕಟ್ಟಡ ನನ್ನ ಮಾಲೀಕತ್ವಕ್ಕೆ ಸೇರಿದ್ದು ಎಂದು ಹೇಳಲು ಯಾವುದೇ ದಾಖಲಾತಿ ಇರುವುದಿಲ್ಲ ಯಾಕೆಂದರೆ ಸರಕಾರಿ ಭೂಮಿಯಲ್ಲಿ ಕಟ್ಟಡ ಕಟ್ಟಿರುತ್ತೇವೆ. ನಾನು ಹೇಳುವಂತೆ ಸರಕಾರಿ ಭೂಮಿಯಲ್ಲಿ ಕಟ್ಟಡ ಕಟ್ಟಿರುವ ಬಗ್ಗೆ ದಾಖಲಾತಿ ಇರುವುದಿಲ್ಲ.

4. ದಾವಾ ಕಟ್ಟಡವನ್ನು ನಾನು ಮತ್ತು ನನ್ನ ತಂದೆ ಸೇರಿ ಕಟ್ಟಿರುತ್ತೇವೆ. ಆ ರೀತಿ 2001 ನೇ ಇಸವಿಯಲ್ಲಿ ಕಟ್ಟಿರುತ್ತೇವೆ. ಸಾಕ್ಷಿಗೆ ಒಂದು ಫೋಟೊ ತೋರಿಸಲಾಗಿ ಅದು ದಾವಾ ಕಟ್ಟಡ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದ್ರಿ ಫೋಟೊವನ್ನು ನೋಡಿ ಹೌದು ಎಂದು ಉತ್ತರಿಸಿರುತ್ತಾರೆ. ಹಾಗಾಗಿ

ಸದ್ರಿ ಫೋಟೊವನ್ನು ನಿಪಿ–24 ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ವಿದ್ಯುತ್ ಮೀಟರಿಗೆ ಸಂಬಂಧಿಸಿದ ಎರಡು ದಾಖಲಾತಿಗಳನ್ನು ತೋರಿಸಿ ಅದು ವಾದಿಯ ಹೆಸರಿಗೆ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದ್ರಿ ದಾಖಲಾತಿಗಳನ್ನು ನೋಡಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಸದ್ರಿ ದಾಖಲಾತಿಗಳನ್ನು ನಿಪಿ–25 ಮತ್ತು 26 ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ಮುಂದುವರೆದು ಸದ್ರಿ ದಾಖಲೆಯಲ್ಲಿ ವಿಳಾಸ ಸಾಗರ ರೋಡ್ ಎಂದು ಇದ್ದು ಅದು ದಾವಾ ಕಟ್ಟಡದ ವಿಳಾಸ ಅಲ್ಲ ಎಂದು ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಸಾಕ್ಷಿಗೆ ನಿಪಿ–2 ದಾಖಲೆಯನ್ನು ತೋರಿಸಿ ಅದರಲ್ಲಿರುವ ಮೊದಲು ಸಹಿ ಯಾರದ್ದು ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನ್ನ ಸಹಿ ಆಗಿರುವುದಿಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿಗೆ ನಿಪಿ–12 ದಾಖಲೆಯನ್ನು ತೋರಿಸಿ ಅದರಲ್ಲಿರುವ ಪುಟ ಸಂಖ್ಯೆ 1, 3 ಮತ್ತು 4 ರಲ್ಲಿ ಇರುವ ಸಹಿ ನಿಮ್ಮದಾಗಿರುತ್ತದೆಯೇ ಎಂದರೆ ಸಾಕ್ಷಿಯು ನನ್ನದಾಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ–2, ನಿಪಿ–12 ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಹಿಗಳಿಗೆ ವ್ಯತ್ಯಾಸ ಇರುತ್ತದೆ. ಅದು ಏನು ವ್ಯತ್ಯಾಸ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಗೆ



ಆತನ ದಿನಾಂಕ 08.07.2024 ರ ಮುಖ್ಯ ವಿಚಾರಣೆಗೆ ಮಾಡಿದ ಸಹಿಯನ್ನು ತೋರಿಸಿದಾಗ ಸಾಕ್ಷಿಯು ಮೊದಲು ಸಂಶಯ ಇರುತ್ತದೆ ಎಂದು ಹೇಳಿ ನಂತರ ಸದ್ರಿ ಸಹಿ ನನ್ನದಾಗಿರುತ್ತದೆ ಎಂದು ನುಡಿದಿರುತ್ತಾರೆ. ನಿಪಿ–2 ಮತ್ತು ನಿಪಿ–12 ಕರಾರು ನಾನು ವಾದಿಗೆ ದಾವಾ ಕಟ್ಟಡವನ್ನು ಬಾಡಿಗೆ ಪಡೆದ ಬಾಬ್ತು ಬರೆದುಕೊಟ್ಟ ಬಾಡಿಗೆ ಕರಾರು ಎಂದರೆ ಸರಿಯಲ್ಲ.

5. ನಾನು ಈ ಮೇಲೆ ಹೇಳಿದಂತೆ ದಾವಾ ಕಟ್ಟಡ ಸರಕಾರಿ ಜಮೀನಿನಲ್ಲಿದ್ದು ಸದ್ರಿ ಸರ್ವೇ ನಂಬರನಲ್ಲಿ ಎಷ್ಟು ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಒಟ್ಟು 12 ಎಕರೆ ಜಮೀನು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸದ್ರಿ 12 ಎಕರೆ ಸರಕಾರಿ ಜಮೀನಿನಲ್ಲಿ ನನ್ನ ಕಟ್ಟಡ ಎಲ್ಲಿ ಬರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸದ್ರಿ ಕಟ್ಟಡವು ಸರಕಾರಿ ಜಮೀನಿನ ಮೂರು ಗುಂಟೆ ಆರು ಅಣೆ ಜಮೀನಿನಲ್ಲಿ ಇರುತ್ತದೆ. ಸದ್ರಿ ಮೂರು ಗುಂಟೆ ಆರು ಅಣೆ ಜಮೀನಿನ ಚತುರ್ಗಡಿ ನನಗೆ ಹೇಳಲು ಆಗುವುದಿಲ್ಲ ಎಂದು ಹೇಳಿ ಸಾಕ್ಷಿಯು ಸ್ವಲ್ಪ ತಡವರಿಸಿ ನನಗೆ ಸದ್ರಿ ಜಮೀನಿನ ಅಕ್ಕಪಕ್ಕದ

ಸರ್ವೇ ನಂಬರ ಹೇಳಬಹುದು ಎಂದು ಹೇಳಿರುತ್ತಾರೆ. ಸದರಿ ಅಕ್ಕಪಕ್ಕದ ಸರ್ವೇ ನಂಬರ 224 ಮತ್ತು 225 ಆಗಿರುತ್ತದೆ. ದಾವಾ ಕಟ್ಟಡದ ಬಲಬದಿಗೆ ಸರ್ವೇ ನಂಬರ 224 ಮತ್ತು ಎಡಬದಿಗೆ ಸರ್ವೇ ನಂಬರ 225 ಬರುತ್ತದೆ. ದಾವಾ ಕಟ್ಟಡ 3 ಗುಂಟೆ 6 ಅಣೆ ಕ್ಷೇತ್ರದಲ್ಲಿ ಇರುತ್ತದೆ ಎಂದು ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ಅದನ್ನೇ ನಾನು ನನ್ನ ತಕರಾರು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ.

6. ದಾವಾ ಕಟ್ಟಡದ ಸಂಕೀರ್ಣದಲ್ಲಿ ನಾಲ್ಕು ಅಂಗಡಿಗಳು ಇರುತ್ತವೆ ಎಂದರೆ ಸರಿ. ಅದರಲ್ಲಿ ಎರಡು ಅಂಗಡಿಯಲ್ಲಿ ನಾನು ಇದ್ದು, ಇನ್ನೊಂದು ಅಂಗಡಿಯಲ್ಲಿ ನನ್ನ ಪತ್ನಿ ಇರುತ್ತಾರೆಂದರೆ ಸರಿ. ಮತ್ತೊಂದು ಅಂಗಡಿಯಲ್ಲಿ ಗಣೇಶ ಭಂಡಾರಿ ಎಂಬವರು ಇರುತ್ತಾರೆ ಎಂದರೆ ಸರಿ. ಸ್ದ್ರಿ ಅಂಗಡಿಯನ್ನು ನನ್ನ ತಂದೆ ಗಣೇಶ ಭಂಡಾರಿಯವರಿಗೆ ಕೊಟ್ಟಿರುತ್ತಾರೆ. ಸ್ದ್ರಿ ಗಣೇಶ ಭಂಡಾರಿಯವರು ಈ ದಾವೆಯಲ್ಲಿ ವಾದಿ ಪರ ಸಾಕ್ಷಿ ಹೇಳಿರುತ್ತಾರೆ ಎಂದರೆ ಸರಿ. ಸ್ದ್ರಿಯವರ ಸಾಕ್ಷಿಯ ಬಗ್ಗೆ ತಿಳಿದುಕೊಂಡಿರುತ್ತೇನೆ. ಸ್ದ್ರಿಯವರು ವಾದಿಗೆ ಬರೆದುಕೊಟ್ಟ ಬಾಡಿಗೆ ಕರಾರನ್ನು ಹಾಜರುಪಡಿಸಿರುತ್ತಾರೆಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಸ್ದ್ರಿಯವರನ್ನು ನನ್ನ ವಕೀಲರು



ಪಾಟೀ ಸವಾಲು ಮಾಡಿರುತ್ತಾರೆ. ಆ ರೀತಿ ಪಾಟೀ ಸವಾಲು ಮಾಡಲು ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸ್ದ್ರಿ ಪಾಟೀ ಸವಾಲಿನ ಬಗ್ಗೆ ನನಗೆ ಮಾಹಿತಿ ಇರುತ್ತದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು .**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**